ಶ್ರೀ ಡಿ. ಪರಮೇಶ್ವರಪ್ಪ.—ಲೀಗಲೈಸ್ ಆಗಿದ್ದರೆ ಇದನ್ನು ಕನ್‌ಸಿಡರು ಮಾಡಬೇಕಾಗುತ್ತದೆ.

ಶ್ರೀ ಬೋಳಾ ರಘುರಾಮಯ್ಯ ಶೆಟ್ಟಿ.—ಇದರಲ್ಲಿ ಲೈಸನ್ಸ್ ಕೊಡುವಾಗ ಬಹಳ ವಿಳಂಬವಾಗುತ್ತಿರುವುದರಿಂದ ಇದನ್ನೂ ಅನ್-ಆಥರೈಸ್ಡ್ ಎಂದು ಒಪ್ಪದೇ ಇರಲು ಒಂದು ಕಾರಣವಾಗುತ್ತದಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಇದನ್ನು ಒಪ್ಪುವುದಿಲ್ಲ.

Conversion of Relief Road from Valloor to Venkatammanahalli to P. W. D. Road

768. Sri P. ANJANAPPA (Pavagada).—

Will the Minister for Public Works be pleased to state :—

(*a*) the action taken to convert the relief road from Valloor to Venkatammanahalli (up to Andhra border) to P.W.D. road ;

(*b*) the action taken to convert the relief road from Dommthamari to Gummagatta ;

(*c*) the action taken to convert the road Thimmaya Kavapadi *Via.*, Sreerangapura to Nagalamadike, into P.W.D. road ?

(*d*) the stage of conversion of relief road from Sreerangapura *Via.*, Gyadigunte to Pendlijeevi into P.W.D. Road ?

Sri BASAVARAJA MAGAVI (Deputy Minister for Public Works). —

(*a*) This will be considered, at the appropriate time.

(*b*) to (*d*) There are no such proposals under consideration of Government.

ಶ್ರೀ ಪಿ. ಆಂಜನಪ್ಪ.—ಉತ್ತರದಲ್ಲಿ ಯಾವ ಸಲಹೆಗಳನ್ನೂ ಪರಿಶೀಲಿಸಲಾಗುವುದಿಲ್ಲ ಎಂದು ಹೇಳಿದರೆ ಪಿ.ಡಬ್ಲ್ಯು.ಡಿ. ನರ್‌ಕ್ಯುರುಪ್ರಕಾರ ಕೆಲವು ರಸ್ತೆಗಳನ್ನು ಇಲಾಖೆಯವರೇ ತೆಗೆದುಕೊಳ್ಳಬೇಕೆಂದು ಇರಲಿಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ವಲ್ಲೂರಿನಿಂದ ವೆಂಕಟಮ್ಮನಹಳ್ಳಿವರೆಗೆ ಇರುವ ರಸ್ತೆ ಅಂದ್ರದ ಗಡಿಯವರೆಗೆ ಹೋಗುತ್ತಿರುವುದರಿಂದ ಇದನ್ನು ಮೊದಲು ತೆಗೆದುಕೊಳ್ಳಬೇಕೆಂದು ವೇಟಿಂಗು ಲಿಸ್ಟ್‌ನಲ್ಲಿ ಇಟ್ಟುಕೊಳ್ಳಲಾಗಿದೆ. ಉಳಿದ ಎಲ್ಲ ರಸ್ತೆಗಳನ್ನೂ ತಾಲ್ಲೂಕು ಡೆವಲಪ್‌ಮೆಂಟು ಬೋರ್ಡಿನವರೇ ಮಾಡಬೇಕು ಎನ್ನುವುದು ಸರಕಾರದ ಉದ್ದೇಶವಾಗಿದೆ.

ಶ್ರೀ ಜೆ. ಆರ್ ಹಾಲಸ್ವಾಮಿ.—ಹಿಂದೆ ಪಿ.ಡಬ್ಲ್ಯು.ಡಿ. ಇಲಾಖೆಯವರು ಯಾವ ಯಾವ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರ ಬಂದಾಗ ಆಯಾ ಸದಸ್ಯರುಗಳ ಕ್ಷೇತ್ರದಲ್ಲಿರುವ ರಸ್ತೆಗಳ ಒಂದು ಪಟ್ಟಿಯನ್ನು ಕೊಟ್ಟಿದ್ದರು ಅದರಂತೆ ರೋಕೋಪಯೋಗಿ ಇಲಾಖೆಯವರು ಹೋದ ಸಾರಿ ಮಾಡಿದ್ದರು ಇದನ್ನೇ ಈ ಸಾಲಿನಲ್ಲೂ ಮುಂದುವರಿಸುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಅನೇಕ ಸಾರಿ ಈ ಮಾನ್ಯ ಸಭೆಗೆ ತಿಳಿಸಿದಂತೆ ಪಿ.ಡಬ್ಲ್ಯು.ಡಿ. ಇಲಾಖೆಯವರು 15 ಸಾವಿರ ಮೈಲಿಗಳಷ್ಟು ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಎಲ್ಲ ಸದಸ್ಯರುಗಳೂ ಕೊಟ್ಟ ಪಟ್ಟಿಯಂತೆ ತೆಗೆದುಕೊಂಡಿದ್ದರೂ ಇನ್ನೂ ಎಲ್ಲ ರಸ್ತೆಗಳನ್ನೂ ಸುವ್ಯಸ್ಥೆಯಿಂದ ಇಡಲು ಸಾಧ್ಯವಾಗಿಲ್ಲ. ಆದುದರಿಂದ ಇನ್ನು ಹೊಸ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎನ್ನುವ ಭಾವನೆ ಸರಕಾರಕ್ಕಿಲ್ಲ. ಎರಡನೆಯದು ಹೊಸ ಸರಕಾರದ ನೀತಿಯ ಪ್ರಕಾರ ಇನ್ನುಮುಂದೆ

ತಾಲ್ಲೂಕು ಬೋರ್ಡುಗಳಿಗೆ ಹೆಚ್ಚು ಹಣ ಕೊಡುತ್ತಿರುವುದರಿಂದ ಇನ್ನು ಮುಂದೆ ಎಲ್ಲ ರಸ್ತೆಗಳ ಕೆಲಸವನ್ನೂ ತಾಲ್ಲೂಕು ಬೋರ್ಡುಗಳವರೇ ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಉತ್ತರದಲ್ಲಿ ಇಲ್ಲ ಎಂದು ಇದೆ ಆದರೆ ಇಲ್ಲಿ ಒಂದು ರಸ್ತೆಯನ್ನು ವೇಟಿಂಗ್ ಲಿಸ್ಟ್‌ನಲ್ಲಿ ಇಟ್ಟಿದ್ದೇವೆಂದು ಹೇಳುತ್ತಾರೆ. ಹಾಗಾದ ವೇಟಿಂಗ್ ಲಿಸ್ಟ್‌ನಲ್ಲಿರುವುದು ರೆಗ್ಯುಲರ್ ಲಿಸ್ಟಿಗೆ ಯಾವಾಗ ಬರುತ್ತದೆ ?

ಶ್ರೀ ಬಸವರಾಜ್ ಮಾಗಾವಿ.—ಇದೊಂದು ಪ್ರಾಮುಖ್ಯವಾದ ರಸ್ತೆಯಾಗಿ ಅಂಧ್ರದ ಗಡಿಯವರೆಗೆ ಹೋಗುವ ರಸ್ತೆಯಾಗಿರುವುದರಿಂದ ಇದನ್ನು ಪಿ. ಡಬ್ಲ್ಯು. ಡಿ. ಯವರೇ ತೆಗೆದುಕೊಳ್ಳಬೇಕು ಎಂದು ಹೇಳಿದೆ. ಇದನ್ನು ಹಂತ ಹಂತವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಕೂಡಲೇ ತೆಗೆದು ಕೊಳ್ಳುವುದಿಲ್ಲ. ಇದರಲ್ಲಿ ಮೂರು ನಾಲ್ಕು ರಸ್ತೆಗಳನ್ನೂ ಪ್ರಸ್ತಾಪ ಮಾಡಿದ್ದಾರೆ. ಇವನ್ನೆಲ್ಲಾ ಪಿ.ಡಬ್ಲ್ಯು.ಡಿ. ಯವರು ತೆಗೆದುಕೊಳ್ಳುವುದಿಲ್ಲ. ಇನ್ನು ಮುಂದೆ ತಾಲ್ಲೂಕಾ ಬೊರ್ಡುಗಳವರೇ ಇಂತಹ ರಸ್ತೆಗಳ ಕೆಲಸಗಳನ್ನು ಮಾಡಬೇಕು ಎನ್ನುವುದು ಸರಕಾರದ ಉದ್ದೇಶವಾಗಿದೆ.

ಶ್ರೀ ಬಿ. ಪಿ. ಗೌಗಾಧರ್.—15 ಸಾವಿರ ಮೈಲಿಗಳಷ್ಟು ರಸ್ತೆಗಳು ಎಂದು ಹೇಳಿದಂತೆ ಅಲ್ಲದೆ ಬೇರೆ ಬೇಕಾದಷ್ಟು ರಸ್ತೆಗಳೂ ಇವೆ. ಕೆಲವು ಕಡೆ ಸರಿಯಾದ ಕಮ್ಯುನಿಕೇಷನ್‌ಗಳೇ ಇಲ್ಲ. ಇಂತಹ ಕಡೆಗಳಲ್ಲಿ ಏರೋಪ್ಲೇನ್‌ನಲ್ಲಿ ಹೋಗಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಆಸ್ಪತ್ರೆಗಳಿಗೆ ಗರ್ಭಿಣಿ ಸ್ತ್ರೀಯರು ಹೋಗಬೇಕಾದರೆ ರಸ್ತೆಗಳೇ ಇಲ್ಲದೇ ಕಷ್ಟಪಡುತ್ತಿದ್ದಾರೆ. ಇದಕ್ಕಾಗಿ ಸರಕಾರ ಸರಿಯಾದ ಒಂದು ನೀತಿಯನ್ನು ಅನುಸರಿಸಿ ಎಲ್ಲ ರಸ್ತೆಗಳನ್ನೂ ಮಾಡಿಸುವುದು ಅವಶ್ಯವಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಹಿಂದೆ ಇಲ್ಲಿ ಚರ್ಚೆಯಾದ ರಸ್ತೆಗಳು ಅಗತ್ಯ ಎಂದು ಯಾವ್ಯಾವ ರಸ್ತೆಗಳ ಪಟ್ಟಿ ಕೊಟ್ಟಿದ್ದರೋ ಅವನ್ನು ಮೊದಲು ಮಾಡುವುದು ಅವಶ್ಯ ಇದೆ. ಇದರ ಪ್ರಕಾರ ತೆಗೆದುಕೊಂಡಿದ್ದೇವೆ ಎಂದು ಉಚಿತವಾಗಿ ಆಗಿನ ಲೋಕೋಪಯೋಗಿ ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಸದಸ್ಯರು ಆಗ ಲಿಖಿತ ಮೂಲಕವಾಗಿ ಪಟ್ಟಿ ಕೊಡುವಾಗ ಇಂತಹ ರಸ್ತೆಗಳ ಅವಶ್ಯಕತೆ ಇತ್ತೋ ಇಲ್ಲವೋ ಅವರೇ ಹೇಳಬೇಕು. ಎರಡನೆಯದು ಅಧಿಕಾರದ ವಿಕೇಂದ್ರೀಕರಣ ಮಾಡಿ ಸಾಧ್ಯವಾದಷ್ಟು ಹಣವನ್ನು ತಾಲ್ಲೂಕ್ ಬೋರ್ಡುಗಳಿಗೇ ಕೊಡಬೇಕೆಂದು ಇದೆ. ಇದಕ್ಕಾಗಿ ಲ್ಯಾಂಡ್ ರೆವೆನ್ಯೂ ಹಣವನ್ನೂ ಪೂರ್ತಿಯಾಗಿ ತಾಲ್ಲೂಕು ಬೋರ್ಡುಗಳಿಗೆ ಕೊಡಲಾಗುತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—15 ಸಾವಿರ ಮೈಲಿಗಳ ರಸ್ತೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದ ಮೇಲೆ ಈ ಪ್ರಶ್ನೆಗೆ ಉತ್ತರ ಕೊಡುವಾಗ ಒಂದು ರಸ್ತೆ ಬಗ್ಗೆ ವೇಟಿಂಗು ಲಿಸ್ಟಿನಲ್ಲಿ ಇದೆ ಎಂದು ಹೇಳಿದರೆ ರಾಜ್ಯದ ಎಲ್ಲಾ ತಾಲ್ಲೂಕುಗಳನ್ನೂ ಒಂದೇ ದೃಷ್ಟಿಯಿಂದ ನೋಡಿದಂತಾಗುವುದಿಲ್ಲ. ಇದು ಡಿಸಕ್ರಿಮಿನೇಷನ್ ಆಗುತ್ತದೆ. ಇಂತಹ ರಸ್ತೆಗಳ ವಿಚಾರವನ್ನು ತೆಗೆದುಕೊಳ್ಳುವ ಪ್ರಶ್ನೆ ಬಂದಾಗ ಸಭೆಯಲ್ಲಿ ಹಿಂದೆ ನೀವು ಏನು ಭರವಸೆ ಕೊಟ್ಟಿದ್ದೀರೋ ಅದರಂತೆ ಇಲ್ಲಿ ಮಾಡಿರುವ ವೇಟಿಂಗುಲಿಸ್ಟ್ ತೆಗೆದು ಹಾಕಿ ಎಲ್ಲ ಕಡೆಗೂ ಒಂದೇ ಸಮನಾಗಿರುವ ನೀತಿಯನ್ನು ಅನುಸರಿಸುತ್ತೀರಾ ?

ಶ್ರೀ ಬಸವರಾಜು ಮಾಗಾವಿ.—ಸಾಧಾರಣವಾಗಿ ಯಾವ ಕಾಲದಲ್ಲೂ ಹೀಗೆ ಕೆಲಸಗಳನ್ನು ತೆಗೆದುಕೊಳ್ಳುವುದಿಲ್ಲ. ಬಹಳ ಪ್ರಾಮುಖ್ಯವಾದ ರಸ್ತೆಗಳಲ್ಲಿ ಇಂಟರ್ ಕಮ್ಯುನಿಕೇಷನ್ ರಸ್ತೆಗಳು ಬರುತ್ತವೆ, ಇಂಡಸ್ಟ್ರಿಯಲ್ ಸೆಂಟರುಗಳು ಬರುತ್ತವೆ. ಪಿಲಗ್ರಿಮೇಜ್ ಸೆಂಟರುಗಳು ಬರುತ್ತವೆ ಇಂತ ಎಕ್ಸ್‌ಪ್ಲೊಷನ್ ಕೇಸುಗಳಲ್ಲಿ ರಸ್ತೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವುಗಳಲ್ಲಿ ಯಾವ ತಾರತಮ್ಯವನ್ನೂ ಮಾಡುವುದಿಲ್ಲ ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

1-30 P. M.

Sri B. B. SAYANAK.—In answer to (a) you have stated that this will be considered at the appropriate time. May I know when that appropriate time would come, Sir ?

Sri BASAVARA J MAGAVI.—The appropriate time would come when there are adequate finance with the Government.

ಶ್ರೀ ಜೆ. ಆರ್. ಹಾಲಸ್ವಾಮಿ.—ನುವಾರು 15 ಸಾವಿರ ಮೈಲಿ ರಸ್ತೆಗಳನ್ನು ತಾಲ್ಲೂಕು ಬೋರ್ಡ್‌ಗೆ ವಹಿಸಿದ್ದೇವೆ ಎಂದು ಹೇಳಿದಿರಿ. ಹಾಗಾದರೆ ಹೊಸ ಮೈಸೂರಿನಲ್ಲಿ ತೆಗೆದುಕೊಂಡಿರುವ ವರ್ಕ್ಸ್‌ನ್ನು ಪೂರೈಸಿಕೊಂಡು ಬಂದಿದ್ದೀರಾ ?

ಶ್ರೀ ಬಸವರಾಜ ಮಾಗಾವಿ.—ಹೊಸ ಮೈಸೂರು, ಹಳೆ ಮೈಸೂರು ಎಂಬ ಭಾವನೆ ಏನೂ ಇಲ್ಲ. ಎಲ್ಲಾ ಭಾಗದಲ್ಲೂ ತಾಲ್ಲೂಕು ಬೋರ್ಡ್ ರಸ್ತೆಗಳನ್ನು ಡಿ. ಎಲ್. ಬಿ ರಸ್ತೆಗಳನ್ನು ತೆಗೆದುಕೊಂಡಿದ್ದಾರೆ. ಎಲ್ಲಾ ರಸ್ತೆಗಳನ್ನು ತೆಗೆದುಕೊಂಡು ದುರಸ್ತು ಮಾಡಬೇಕಾದರೆ ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ. ಹಣದ ಅವಶ್ಯಕತೆ ನೋಡಿಕೊಂಡು ಆ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ. ಟೂರಿಸ್ಟ್ ಇಂಪಾರ್ಟೆನ್ಸ್, ಇಂಡಸ್ಟ್ರಿಯಲ್ ಇಂಪಾರ್ಟೆನ್ಸ್, ಮತ್ತು ಪಿಲ್ಗ್ರಿಮೇಜ್ ಇಂಪಾರ್ಟೆನ್ಸ್ ಇವುಗಳು ಇದ್ದು ಆ ರಸ್ತೆ ಮಾಡಿಸಬೇಕಾದ್ದು ಅವಶ್ಯಕ ಎಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಖಂಡಿತ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಇದರಲ್ಲಿ ಅಮೈಲೆಬಿಲಿಟಿ ಆಫ್ ಫಂಡ್ಸ್ ಮೇಲೆ ಮಾಡುತ್ತಾರೆ ಎಂದು ಹೇಳಿದ್ದಾರೆ. ಈಗ ತಾವು ಒಂದು ಆರ್ಡರ್ ಕೊಟ್ಟಿದ್ದೀರಿ, 5—6 ಮೈಲಿ ಮೇಲ್ಪಟ್ಟ ರಸ್ತೆಗಳನ್ನು ಪಿ. ಡಬ್ಲ್ಯು. ಡಿ. ಗೆ ವಹಿಸಿ ದುರಸ್ತು ಮಾಡಬೇಕು ಎಂದು ಈಗ ವಹಿಸಿಕೊಂಡಿರುವ ರಸ್ತೆಗಳನ್ನು ದುರಸ್ತು ಮಾಡಿದ್ದೀರಾ ?

ಶ್ರೀ ಬಸವರಾಜ ಮಾಗಾವಿ.—ಅಧಿಕಾರ ವಿಕೇಂದ್ರೀಕರಣ ಮಾಡಿದ ಮೇಲೆ ವಾರ್ಷಿಕ ಕೆಲಸ ಗಳನ್ನು ತೆಗೆದುಕೊಂಡು ಮಾಡಬಹುದು. ಯಾವ ಯಾವ ಕೆಲಸ ಅವರಿಗೆ ಸೇರಿದೆಯೋ, ಅದನ್ನು ತಾಲ್ಲೂಕು ಬೋರ್ಡುಗಳು ವಹಿಸಿಕೊಂಡು ಮಾಡುತ್ತಾ ಇದ್ದಾರೆ. ಅದರ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸುಧಾರಣೆ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಮಾನ್ಯ ಮಂತ್ರಿಗಳು ತಾಲ್ಲೂಕು ಬೋರ್ಡ್‌ನವರು 15 ಸಾವಿರ ಮೈಲಿ ರಸ್ತೆಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದರು. ಅದರಲ್ಲಿ ಪಾವಗಡ ತಾಲ್ಲೂಕಿಗೆ ಸಂಬಂಧಪಟ್ಟಂತೆ ಎಷ್ಟು ಮೈಲಿ ರಸ್ತೆಗಳನ್ನು ತೆಗೆದುಕೊಂಡಿದ್ದೀರಿ. ಒಂದುವೇಳೆ ಇದು ವೈಟಿಂಗ್ ಲಿಸ್ಟ್‌ನಲ್ಲಿದ್ದರೆ ಇದರ ಸೀರಿಯರ್ ನಂಬರ್ ಏನು ?

ಶ್ರೀ ಬಸವರಾಜ ಮಾಗಾವಿ.—ತಾಲ್ಲೂಕಾವೈಸ್ ಫಿಗರ್ಸ್ ಇಲ್ಲ. ಡಿಸ್ಟ್ರಿಕ್ಟ್ ವೈಸ್ ಫಿಗರ್ಸ್ ಹೇಳಬಹುದು. ವೈಟಿಂಗ್ ಲಿಸ್ಟ್‌ನಲ್ಲಿ ಸಿರಿಯರ್ ನಂಬರ್ ಕೊಟ್ಟಿಲ್ಲ.

ಶ್ರೀ ಬಿ. ಎಂ. ಇವಿನಬ್ಬ.—ಮಾನ್ಯ ಮಂತ್ರಿಗಳು ತಾಲ್ಲೂಕು ಬೋರ್ಡ್‌ಗೆ ಅನೇಕ ರಸ್ತೆಗಳನ್ನು ತೆಗೆದುಕೊಳ್ಳಲು ಆದೇಶ ಕೊಟ್ಟಿದ್ದೇವೆ ಎಂದು ಹೇಳಿದರು. ಅನೇಕ ತಾಲ್ಲೂಕು ಬೋರ್ಡ್‌ಗಳಲ್ಲಿ ಯಾವ ತರಹ ಫಂಡ್ ಸಹ ಇಲ್ಲ. ರಸ್ತೆ ದುರಸ್ತಿ ಮಾಡುವುದು ಜಾಸ್ತಿ ಉಂಟು. ಕಂದಾಯದಲ್ಲಿ ಇಷ್ಟು ಪರ್ಸೆಂಟು ಕೊಡುತ್ತೇವೆ ಎಂದು ಹೇಳಿದ್ದಾರೆ. ಕೆಲವು ಕಡೆ ತಾಲ್ಲೂಕು ಬೋರ್ಡ್‌ಗೆ ಕಂದಾಯ ಬಹಳ ಕಡಿಮೆ ಇದೆ. ಅಂತಹ ಸಂದರ್ಭದಲ್ಲಿ ತಾಲ್ಲೂಕು ಬೋರ್ಡ್ ಆಗಲಿ, ಪಿ. ಡಬ್ಲ್ಯು ಡಿ. ಆಗಲಿ ಯಾರೂ ಮಾಡುವುದಿಲ್ಲ. ಹೀಗಾದರೆ ರಸ್ತೆಗಳ ಗತಿ ಏನು ಸ್ವಾಮಿ ?

ಶ್ರೀ ಬಸವರಾಜ್ ಮಾಗಾವಿ.—ಕಂದಾಯದಲ್ಲಿ ಶೇಕಡ 50 ಪರ್ಸೆಂಟು ತಾಲ್ಲೂಕು ಬೋರ್ಡುಗಳಿಗೆ, 30 ಪರ್ಸೆಂಟು ಗ್ರಾಮ ಪಂಚಾಯಿತಿಗಳಿಗೆ ಹೋಗುತ್ತದೆ. ಇನ್ನು ಉಳಿದ ಶೇಕಡ 20ರಷ್ಟು ಹಣ ನಾವು ಒಂದು ಈಕ್ವೇಲೈಸೇಷನ್ ಆಫ್ ಫಂಡ್ಸ್‌ನಲ್ಲಿ ಇಟ್ಟು ಯಾವ ಯಾವ ತಾಲ್ಲೂಕು ಬೋರ್ಡುಗಳಿಗೆ ಆದಾಯ ಕಡಿಮೆ ಇದೆ ಯಾವ ಯಾವುದಕ್ಕೆ ಅನಾನುಕೂಲತೆ ಇದೆ ಎಂದು ನೋಡಿಕೊಂಡು ಅವುಗಳಿಗೆ ಹಂಚಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಮಂತ್ರಿಗಳು 15 ಸಾವಿರ ಮೈಲಿ ರಸ್ತೆಗಳನ್ನು ತಾಲ್ಲೂಕು ಬೋರ್ಡ್‌ನವರು ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು. ಹಾಗಾದರೆ ಬೇರೆ ಯಾವುದಾದರೂ ವರ್ಕ್ಸ್‌ನ್ನು ತೆಗೆದುಕೊಳ್ಳಬಾರದು ಎಂದು ನಿರ್ಣಯ ಮಾಡಿದ್ದೀರಾ ?

ಶ್ರೀ ಬಸವರಾಜ ಮಾಗಾವಿ.—ಬೇರೆ ವರ್ಕ್ಸ್ ತೆಗೆದುಕೊಳ್ಳಬಾರದು ಎಂತ ಏನೂ ಇಲ್ಲ. ನಿಧಾನವಾಗಿ ಅದರ ಅವಶ್ಯಕತೆ ನೋಡಿಕೊಂಡು ಮಾಡುತ್ತೇವೆ. ಮಾನ್ಯ ಸದಸ್ಯರು ಅಂತಹ ಅವಶ್ಯಕತೆ ಎಲ್ಲೆಲ್ಲಿ ಇದೆ ಎಂದು ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತೀರ್ಥಯಾತ್ರೆಗಳ ಮತ್ತು ಕೈಗಾರಿಕೆಗಳ ಪ್ರಾಮುಖ್ಯತೆಯ ಹೆಸರಿನಲ್ಲಿ ರಸ್ತೆಗಳನ್ನು ಮಾಡಿಸುವಾಗ ಹೊಸ ಮೈಸೂರು ಹಳೆ ಮೈಸೂರು ಎನ್ನುವ ತಾರತಮ್ಯ ಮಾಡುತ್ತೀರಿ. ಇದು ಸರಿಯೇ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರಿಗೆ ಡೀಟೇಲ್ಸ್ ಬೇಕಾದರೆ ಈ ಹೌಸ್ ಟೇಬಲ್ ಮೇಲೆ ಇಡುತ್ತೇನೆ. ಖಂಡಿತವಾಗಿಯೂ ಇದರಲ್ಲಿ ಸರ್ಕಾರದವರು ತಾರತಮ್ಯತೆ ಮಾಡಿಲ್ಲ.

ಶ್ರೀ ಬಿ. ಎನ್. ರಾಮೇಗೌಡ.—ಈಗಾಗಲೇ ಯಾವ ರಸ್ತೆಗಳನ್ನು ಪಿ. ಡಬ್ಲ್ಯು. ಡಿ. ಯವರು ತೆಗೆದುಕೊಂಡಿದ್ದಾರೋ ಆ ರಸ್ತೆಗಳನ್ನು ಉತ್ತಮರೀತಿಯಲ್ಲಿ ಇಡಬೇಕಾದರೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ ?

ಶ್ರೀ ಬಸವರಾಜ ಮಾಗಾವಿ.—ಸದಸ್ಯರು ಹೇಳಿದ ಮಾತಿನಲ್ಲಿ ನನಗೆ ವಿರೋಧಾಭಾಸ ಕಾಣುತ್ತದೆ. ಅನೇಕ ಸದಸ್ಯರು ಈ ರಸ್ತೆಗಳ ಕೆಲಸಗಳನ್ನು ಬಿಟ್ಟು ನೀರಾವರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂದು ಒತ್ತಾಯ ಪಡಿಸಿದ ಮೇಲೆ, ಈ ರಸ್ತೆಗಳ ದುರಸ್ತಿಗೆ ಮಾನ್ಯ ಆರ್ಥಿಕ ಸಚಿವರು ಕಡಿಮೆ ಹಣ ಒದಗಿಸಿರುತ್ತಾರೆ. ಈಗಲೂ ಅನೇಕ ಸದಸ್ಯರು ಈ ರಸ್ತೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು ಎಂದು ಒತ್ತಾಯ ಪಡಿಸಿದರೆ ಸರ್ಕಾರ ಅದಕ್ಕೆ ಹಿಂದು ಮುಂದು ನೋಡುವುದಿಲ್ಲ.

ಶ್ರೀ ಎಂ. ಬಸವರಾಜು.—ಮತದಾರರ ಕ್ಷೇತ್ರಗಳಲ್ಲಿ ತಾರತಮ್ಯ ಮಾಡಿಲ್ಲ ಎಂದು ಹೇಳಿದರು. ತಾರತಮ್ಯ ಮಾಡಿರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಪರಿಹಾರ ಮಾಡುತ್ತೀರಾ ಸ್ವಾಮಿ ?

ಶ್ರೀ ಬಸವರಾಜ ಮಾಗಾವಿ.—ನನಗೆ ಗೊತ್ತಿದ್ದಮಟ್ಟಿಗೆ ತಾರತಮ್ಯವಾಗಿಲ್ಲ. ಈಗ ನಾನು ಹೇಳಿದ ರೀತಿಯಿಂದ ರಸ್ತೆ ಅತ್ಯವಶ್ಯವಾಗಿದೆ ಎಂದು ಸರ್ಕಾರದ ಗಮನಕ್ಕೆ ತಂದರೆ ಯಾವುದೇ ಪಕ್ಷಕ್ಕೆ ಸಂಬಂಧಪಟ್ಟ ಕ್ಷೇತ್ರವಾಗಿದ್ದರೂ ಕೂಡ ಅದನ್ನು ತೆಗೆದುಕೊಂಡು ವ್ಯವಸ್ಥಿತವಾದ ರೀತಿಯಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಆರು ಮೈಲಿ, 8 ಮೈಲಿ ಇರತಕ್ಕ ರಸ್ತೆಗಳನ್ನು, ಯಾವ ಊರಿಗೆ ರಸ್ತೆಗಳು ಇಲ್ಲವೋ ಅಂಥ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ನಾನು ಬರೆದಿದ್ದರೂ ಅಂಥವುಗಳನ್ನು ತೆಗೆದುಕೊಂಡಿಲ್ಲ. ಈಗಲಾದರೂ ಅಂಥ ರಸ್ತೆಗಳನ್ನು ತೆಗೆದುಕೊಳ್ಳಲಾಗುತ್ತದೆಯೇ ಸ್ವಾಮಿ.

ಶ್ರೀ ಬಸವರಾಜ ಮಾಗಾವಿ.—ಇವುಗಳನ್ನು ಸರ್ಕಾರ ಯಾವ ಅಳತೆಗೋಲಿನಿಂದ ಪರಿಶೀಲಿಸುತ್ತದೆ ಎನ್ನುವ ಮಾತನ್ನು ಹೇಳಿದ್ದೇನೆ.

It must be a place of tourist importance or industrial importance or it must be a place of great pilgrimage. ಈ ಮೂರರ ಕಕ್ಷೆಯಲ್ಲಿ ಬರುವುದಿದ್ದರೆ ಸರ್ಕಾರ ಖಂಡಿತವಾಗಿ ಪರಿಶೀಲಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಹಳ್ಳಿಗಳಿಗೆ ರಸ್ತೆಗಳಿಲ್ಲದೆ ಎಂಟು ಹತ್ತು ಮೈಲಿ ದೂರ ನಡೆದುಕೊಂಡು ಹೋಗಬೇಕಾಗಿದೆ. ಮಳೆಗಾಲದಲ್ಲಿ ಹಳ್ಳಗಳನ್ನು ದಾಟುವುದಕ್ಕೆ ಸಹ ಆಗುವುದಿಲ್ಲ. ಗರ್ಭಿಣಿಯರನ್ನು ಮತ್ತು ರೋಗಿಗಳನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಬೇಕಾದರೆ ತೊಂದರೆ ಇದೆ. ಮಾನ್ಯ ಮಂತ್ರಿಗಳು ಹೇಳುವಂತೆ ಯಾತ್ರಾ ಸ್ಥಳಗಳು ಮುಂತಾದುವನ್ನು ನಾವು ಎಲ್ಲಿಂದ ತರೋಣ ? ನಮಗೆ ಬೇಕಾದ್ದು ಆರೋಗ್ಯವನ್ನು ಕಾಪಾಡಲು ಸೌಕರ್ಯಗಳು. ಮಾನ್ಯ ಮಂತ್ರಿಗಳು ಹೇಳುವ ವಿಷಯವೇನಿದೆ, ಗೌಂಡ್ ಏನಿದೆ ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ.

ಶ್ರೀ ಬಸವರಾಜ ಮಾಗಾವಿ.—ಗ್ರಾಮಾಂತರ ರಸ್ತೆಗಳನ್ನು ತಾಲ್ಲೂಕು ಬೋರ್ಡ್‌ಗಳು ಮಾಡಬೇಕೆಂದು ಸರ್ವೇಸಾಮಾನ್ಯವಾಗಿ ಒಪ್ಪಿಕೊಂಡಿರುವ ವಿಷಯ. ಅನೇಕ ಮಾನ್ಯ ಸದಸ್ಯರು ಹೇಳುತ್ತಿರುವುದು ಗ್ರಾಮಾಂತರ ರಸ್ತೆಗಳ ಪಿಚಾರ. ತಾಲ್ಲೂಕು ಬೋರ್ಡ್‌ಗಳು ಮಾಡಬೇಕಾದ ರಸ್ತೆ ಕೆಲಸಗಳನ್ನು ನಾವು ಮಾಡುತ್ತಾ ಹೋದರೆ ತಾಲ್ಲೂಕು ಬೋರ್ಡ್‌ಗಳಿಗೆ ಸಾಕಷ್ಟು ಕೆಲಸವಿರುವುದಿಲ್ಲ. ತಾಲ್ಲೂಕು ಬೋರ್ಡುಗಳಿಗೆ ಸಾಕಷ್ಟು ಜವಾಬ್ದಾರಿಯನ್ನು ವಹಿಸಿಕೊಡಬೇಕು, ಅವರ ಕಾರ್ಯಕ್ಷೇತ್ರಕ್ಕೆ ಸಾಕಷ್ಟು ಅನುಕೂಲತೆಯನ್ನು ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಅವರಿಗೆ ಹೆಚ್ಚಿನ ಧನಸಹಾಯವನ್ನು ಮಾಡಿಕೊಂಡು ಬರುತ್ತಿದ್ದೇವೆ. ಬಹುಶಃ ಹೊಸ ಕಾರ್ಯಕ್ರಮ ಕಾರ್ಯಾಚರಣೆಯಲ್ಲಿ ಬರುವುದಕ್ಕೆ ವಿಳಂಬವಾಗಿದೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ತಾಳಿದ್ದಾರೆ. ಹೆಚ್ಚಿನ ಧನ ಸಹಾಯ ಬಂದ ಮೇಲೆ ಇದೆಲ್ಲ ಸರಿಹೋಗುತ್ತದೆ ಎಂದು ಸರ್ಕಾರ ಭಾವಿಸಿಕೊಂಡಿದೆ.

ಶ್ರೀ ಬೋಳಾ ರಘುರಾಮ ಶೆಟ್ಟಿ.—ಕೆಲವು ರಸ್ತೆಗಳನ್ನು ತಾಲ್ಲೂಕು ಬೋರ್ಡಿನವರು ಮಾಡಬೇಕು ಎಂದು ಹೇಳಿದರು. 1969–70ನೇ ಸಾಲಿಗೆ ತಾಲ್ಲೂಕು ಬೋರ್ಡ್‌ಗಳಿಗೆ ಎಷ್ಟು ಹಣ ಸಿಕ್ಕುತ್ತದೆ ಎಂದು ಹೇಳಬಹುದೋ ?

ಶ್ರೀ ಬಸವರಾಜ ಮಾಗಾವಿ.—ಎ್ಯಂಡ್ ರೆವೆನ್ಯೂ ಸೇಕಡ 50 ರಷ್ಟು ತಾಲ್ಲೂಕು ಬೋರ್ಡ್‌ಗಳಿಗೆ ಸಿಕ್ಕುತ್ತದೆ. ಎ್ಯಂಡ್ ರೆವೆನ್ಯೂ ಸಸ್‌ಪೆನ್‌ಷನ್ ಆಗಬೇಕೆಂದು ಮಾನ್ಯ ಸದಸ್ಯರು ಕೇಳಿದೆ ಹೋದರೆ ಹೆಚ್ಚಿನ ಮಟ್ಟದಲ್ಲಿ ಸಿಕ್ಕುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ತಾಲ್ಲೂಕು ಬೋರ್ಡ್‌ಗಳು ರಸ್ತೆಗಳನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳಬೇಕು ಎಂದು ಹೇಳಿದರು. ಕೆಲವು ಕಡೆ ಸೇತುವೆಗಳು ಆಗಬೇಕಾಗಿದ್ದು ಅದಕ್ಕೆ 50 ಸಾವಿರ, 60 ಸಾವಿರ ರೂಪಾಯಿ, ಲಕ್ಷ ರೂಪಾಯಿ ಹೀಗೆಲ್ಲ ಖರ್ಚಾಗುತ್ತವೆ. ತಾಲ್ಲೂಕು ಬೋರ್ಡಿನವರು ಅದನ್ನೆಲ್ಲ ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥ ಕಡೆ ಸರ್ಕಾರದವರೇ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಬಸವರಾಜ ಮಾಗಾವಿ.—ಬಜೆಟಿನಲ್ಲಿ ಕ್ಯಾಸ್ ಡ್ರೇನೇಜ್ ಅನ್ ನಾನ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ರೋಡ್ಸ್ ಎಂದು ಹಣವನ್ನು ಇಡಲಾಗಿದೆ. ಮಾನ್ಯ ಸದಸ್ಯರು ಹೇಳಿದಂಥ ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ತಂದರೆ ಆ ಫಂಡಿನಿಂದ ಅಂಥ ಕಾರ್ಯಗಳನ್ನು ತೆಗೆದು ಕೊಳ್ಳಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ಸೇಕಡ 82 ಅರಣ್ಯ ಭೂಮಿ, ಜಮೀನು ಬಹಳ ಕಡಿಮೆ, ಭೂ ಕಂದಾಯ ಕಡಿಮೆ ಇದೆ. ಆದುದರಿಂದ ಅಲ್ಲಿ ರಸ್ತೆ ಮಾಡಿಸಲು ಫಾರೆಸ್ಟ್ ಇಲಾಖೆಯಿಂದ ಹಣ ಕೊಡಿಸುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಈಗತಾನೆ ಹೇಳಿದೆ. ಸೇಕಡ 20ರಷ್ಟು ಕನ್‌ಸಾಲಿಡೇಟೆಡ್ ಫಂಡಿನಿಂದ ತಾಲ್ಲೂಕು ಬೋರ್ಡಿಗೆ ಕೊಡಬೇಕು, ಕೊಡುತ್ತಿದ್ದೇವೆ. ಅದು ಕಡಿಮೆಯಾದರೆ ಸರಕಾರ ಹೆಚ್ಚು ಗ್ರಾಂಟು ಕೊಡಲು ವ್ಯವಸ್ಥೆ ಮಾಡುವುದು. ಹೊಸ ವ್ಯವಸ್ಥೆಯೇನಿದೆ ಅದು ಕಾರ್ಯರೂಪಕ್ಕೆ ಬಂದಿಲ್ಲದಿರುವಾಗ ಇಂದು ಆ ವಿಚಾರದಲ್ಲಿ ಅಭಿಪ್ರಾಯ ಹೇಳುವುದು ಸರಿಯಿಲ್ಲ ಎಂಬ ಭಾವನೆ ಇದೆ.

Construction of Nagalamadike Project in Pavagada Taluk

772. Sri P. ANJANAPPA (Pavagada).—

Will the Chief Minister be pleased to state :—

(*a*) the stage of construction of Nagalamadike project in Pavagada taluk ;

(*b*) the auction taken in the matter ?

Sri D. PARAMESHWARAPPA (Deputy Minister for Major Irrigation and Electricity) [on behalf of SRI VEERENDRA PATIL (Chief Minister)].—

(*a*) Work is not taken up.

(*b*) The project has been sent to Government of India for technical clearance.

ಶ್ರೀ ಪಿ. ಆಂಜನಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ 'ಕಾರ್ಯವನ್ನು ಕೈಕೊಂಡಿಲ್ಲ' ಎಂದು ತಿಳಿಸಲಾಗಿದೆ. ಯಾವ ಕಾಲಕ್ಕೆ ಈ ಪ್ರಾಜೆಕ್ಟ್ ತೆಗೆದುಕೊಳ್ಳುವುದು ?

ಶ್ರೀ ಡಿ. ಪರಮೇಶ್ವರಪ್ಪ.—ಈಗ ಈ ಪ್ರಾಜೆಕ್ಟ್ ಬಗ್ಗೆ ಟೆಕ್ನಿಕಲ್ ಕ್ಲಿಯರೆನ್ಸಿಗೆ ಸಿ. ಡಬ್ಲ್ಯು. ಪಿ. ಸಿ. ಗೆ ಕಳಿಸಿತ್ತು, ಅವರು ಕೆಲವು ಕಾಮೆಂಟ್ಸ್ ಮಾಡಿದ್ದಾರೆ. 1892ರ ಅಗ್ರಿಮೆಂಟ್